ಮೆಷಿನುಗಳು ಬಂದಿರುವುದರಿಂದ ಹೀಗೆ ಗಂಡು ಹೆಣ್ಣಾಗಿ ಎಮ್ಮೆ ಕರೆಯುವ ಪ್ರಸಂಗಗಳನ್ನು ನೋಡುವುದು ಕಷ್ಟ. ಹುಲಿ, ಸಿಂಹ, ಕರಡಿ, ಕೋತಿಗಳಿಗೆ ಹೋಲಿಸಿದರೆ ಎಮ್ಮೆ ತುಂಬಾ ಸಭ್ಯ ಮತ್ತು ಮುಗ್ಧ ಪ್ರಾಣಿ. ಎಮ್ಮೆಯ ಮನಸ್ಸು ಮಗುವಿನಂತೆ ಮುಗ್ಧವಾಗಿರುವುದರಿಂದ, ಮಗುವಿಗೂ ಎಷ್ಟೋ ಬಾರಿ ನಮ್ಮಲ್ಲಿ ಎಮ್ಮೆ ತಮ್ಮಣ್ಣ ಎಂದು ಪ್ರೀತಿಯಿಂದ ಕರೆಯುವುದುಂಟು.

ಎಮ್ಮೆ ಹಾಲು ಕುಡಿದು ಬೆಳೆದವನು ಕೋಣಕ್ಕಿಂತಲೂ ಶಕ್ತಿಶಾಲಿ ಎಂದು ನಮ್ಮ ಹಳ್ಳಿಗಳಲ್ಲಿ ಹಿರಿಯರು ಹೇಳುತ್ತಾರೆ. ಅಂದರೆ ಎಮ್ಮೆ ಹಾಲಿನಲ್ಲಿ ಅಷ್ಟೊಂದು ಆರೋಗ್ಯಕ್ಕೆ ಪೂರಕ ಅಂಶಗಳಿರುತ್ತವೆ ಎಂಬುದು ಇದರ ತಾತ್ಪರ್ಯ. ಇನ್ನು ಗುಣದಲ್ಲಿಯೂ ಎಮ್ಮೆಗಳು ಮನುಷ್ಯನಿಗಿಂತ ಸಾವಿರ ಪಾಲು ಉತ್ತಮ. ಮನುಷ್ಯನಂತೆ ಈ ಎಮ್ಮೆಗಳಿಗೆ ಗುಂಡು, ಸಿಗರೇಟು, ಬೀಡಿ, ಗುಟ್ಕಾ ಸೇವನೆ ಮುಂತಾದ ಯಾವ ದುಶ್ಚಟಗಳೂ ಇರಲ್ಲ. ಹೀಗಾಗಿ ಎಷ್ಟೋ ವಿಷಯಗಳಲ್ಲಿ ಮನುಷ್ಯ ಆಧುನಿಕನಾಗಿದ್ದರೂ, ಪ್ರಾಚೀನ ಕಾಲದ ಮನಸ್ಥಿತಿಯನ್ನೇ ಇಂದಿಗೂ ಉಳಿಸಿಕೊಂಡಿರುವ ಎಮ್ಮೆಗಳಿಂದ ಕಲಿಯಬೇಕಾದದ್ದು ಬೇಕಾದಷ್ಟಿವೆ.

ಎಷ್ಟೋ ಬಾರಿ ಎಂ.ಎ. ಡಿಗ್ರಿ ಓದುವುದಕ್ಕಿಂತ ಸರಳವಾಗಿ, ಸುಲಭವಾಗಿ ಎಮ್ಮೆಯಿಂದ ಕಲಿಯುವುದೇ ಹೆಚ್ಚಿದೆ ಎಂಬುದು ಎಮ್ಮೆಯ ಸಂಪನ್ನ ಗುಣಗಳನ್ನು ಅವಲೋಕಿಸುವಾಗ ಅನ್ನಿಸುವುದು ಸುಳ್ಳಲ್ಲ. ಇಷ್ಟಾಗಿಯೂ ವಯಸ್ಸಾದ ಎಮ್ಮೆಗಳಿಗೆ ಎಮ್ಮೆಗೊಡ್ಡು ಅಥವಾ ಗೊಡ್ಡೆಮ್ಮೆ ಎಂದು ಮನುಷ್ಯನೆಂಬ ಪ್ರಾಣಿ ಪದೇಪದೇ ಹಂಗಿಸುವುದು ವಿಪರ್ಯಾಸವೇ.

ಹಳ್ಳಿಗಳಲ್ಲಿ ಯಾರನ್ನಾದರೂ ಬಯ್ಯುವುದಿದ್ದರೆ 'ಎಮ್ಮೆ ಕಾಯಲು ಹೋಗು' ಎಂದು ಹೇಳುವ ಕೆಟ್ಟ ಚಾಳಿಯೂ ಕೆಲವರಿಗೆ ಇದೆ. ವಾಸ್ತವದಲ್ಲಿ ಎಮ್ಮೆಯನ್ನು ನಾವು ಕಾಯುವುದಕ್ಕಿಂತ ನಮ್ಮ ಹಿತವನ್ನು ಎಮ್ಮೆ ಕಾಯುವ ಸಂದರ್ಭಗಳೇ ಹೆಚ್ಚು. ನಮ್ಮಲ್ಲಿ ಕೆಲಸಕ್ಕೆ ಬಾರದ ಎಂಎಲ್‌ಎಗಳನ್ನು ನೋಡಿದರೆ ಅವರಿಗಿಂತ ಎಮ್ಮೆಗಳೇ ವಾಸಿ ಎಂಬ ಅಭಿಪ್ರಾಯ ಮೂಡುವುದು ಸಹಜ. ಹೀಗೆ ಬಹು ಉಪಕಾರಿಯಾದ ಎಮ್ಮೆಗಳಿಗೆ ಚುನಾವಣೆಯಲ್ಲಿ ಸ್ಪರ್ಧಿಸಲು ಈ ಪ್ರಜಾಪ್ರಭುತ್ವದಲ್ಲಿ ಯಾಕೆ ಅವಕಾಶ ಕೊಟ್ಟಿಲ್ಲವೋ ನಾ ಕಾಣೆ.

ನೋಡಲು ತುಂಬಾ ಸೊಂಪಾಗಿ, ಗುಂಡು ಗುಂಡಾಗಿರುವ ಎಮ್ಮೆಗಳಿಗೆ ನೀರಿನ ಹೊಂಡವಾಗಲಿ ಅಥವಾ ಕೆಸರಿನ ಹೊಂಡವಾಗಲಿ ಕಂಡರೆ, ಕೋಣಗಳೊಂದಿಗೆ ಬೊಂಬಾಟಾಗಿ ಜಲಕ್ರೀಡೆ ಆಡುವ ಕಲೆ ಹೇಗೆ ಎಂಬುದು ಚೆನ್ನಾಗಿ ಗೊತ್ತು. ಎಮ್ಮೆಗೂ ಮತ್ತು ಇಂಥ ಹೊಂಡಕ್ಕೂ ಇರುವ ಬಾಂಧವ್ಯದ ದ್ಯೋತಕವಾಗಿ ಉತ್ತರ ಕನ್ನಡದ ಸಿದ್ದಾಪುರ ಬಳಿಯ ಒಂದು ಹಳ್ಳಿಗೆ ಎಮ್ಮೆನಹೊಂಡ ಎಂದೇ ಹೆಸರಿಟ್ಟಿರುವುದು ವಿಶೇಷ.

ಎಮ್ಮೆಯದ್ದು ಮಂದ ಬುದ್ಧಿ ಎಂದು ಕೆಲವರು ಟೀಕಿಸುತ್ತಾರೆ. ಆದರೆ ನನ್ನ ದೃಷ್ಟಿಯಲ್ಲಿ ಅದು ಮಂದ ಬುದ್ಧಿಯಲ್ಲ. ಚಂದ ಬುದ್ಧಿ. ಕಾರಣ ಎಮ್ಮೆ ಯಾವತ್ತೂ ಮನುಷ್ಯನಂತೆ ಬುದ್ಧಿಗೇಡಿಯಾಗಿ ವರ್ತಿಸುವುದಿಲ್ಲ. ಬೇರೆಯವರ ಕಿವಿ ಮೇಲೆ ಹೂ ಇಡಲು ಪ್ರಯತ್ನಿಸುವುದಿಲ್ಲ. ಪರರನ್ನು ಕಂಡರೆ ಹೊಟ್ಟೆಕಿಚ್ಚುಪಡುವ, ಅಪಹಾಸ್ಯ ಮಾಡುವ ಅಥವಾ ದ್ವೇಷದಿಂದ ಕಾಣುವ, ಅಷ್ಟೇ ಏಕೆ ಕೋಮುಭಾವನೆಯಿಂದ ನೋಡುವ ಅವಗುಣಗಳನ್ನು ಎಮ್ಮೆ ಯಾವತ್ತೂ ಎಲ್ಲಿಯೂ ಬೆಳೆಸಿಕೊಂಡಿದ್ದನ್ನು ನೋಡಿದವರಿಲ್ಲ.

ಗೆದ್ದಾಗ ಹಿಗ್ಗದೆ ಸೋತಾಗ ಕುಗ್ಗದೆ, ಗುದ್ದಾಡದೇ ಇರುವ ಎಮ್ಮೆಯ ಸ್ಥಿತಪ್ರಜ್ಞ ಗುಣ ಮನುಷ್ಯನಲ್ಲಿ ಹೆಚ್ಚಿದ್ದರೆ ಡಯಾಬಿಟಿಸ್, ಬ್ಲಡ್ ಪ್ರೆಷರ್‌ನಂತಹ ಕಾಯಿಲೆಗಳೂ ಕಡಿಮೆಯಾಗುತ್ತಿತ್ತೇನೊ. ಸಾಮಾನ್ಯವಾಗಿ ಎಮ್ಮೆ ತನ್ನ ಪಾಡಿಗೆ ತಾನು ಇರುವಂತಹ ಪ್ರಾಣಿ. ಆದರೆ ವಿನಾಕಾರಣ ತನ್ನ ತಂಟೆಗೆ ಬಂದರೆ ಈ ಎಮ್ಮೆ ಒಮ್ಮೆ ಹೂಂಕರಿಸಿದರೆ ಸಾಕು ಅದರ ತಂಟೆಗೆ ಹೋದ ಕಿತಾಪತಿಗಳ ಚೆಡ್ಡಿ



ಒದ್ದೆ ಆಗುವುದು ಗ್ಯಾರಂಟಿ.

ನಮ್ಮಲ್ಲಿ ಊರುಕೇರಿ, ಪೇಟೆ ಪಟ್ಟಣಗಳ ರಸ್ತೆಗಳ ಮೇಲೆ ಎಮ್ಮೆಗಳ ಗ್ವಾಲೆಗಳು ಶೇಷಶಯನನನ್ನು ನೆನಪಿಸುವಂತೆ ಬೀಡು ಬಿಡುವುದರಿಂದ ರೋಡ್ ಹಂಪುಗಳ ಕೆಲಸವನ್ನು ಕೂಡ ಈ ಎಮ್ಮೆಗಳೇ ಯಾವುದೇ ಸಂಬಳ ಪಡೆಯದೇ ನಿರ್ವಹಿಸುತ್ತಾ, ಸಮಾಜ ಸೇವೆಯಲ್ಲಿಯೂ ಸೈ ಎನಿಸಿಕೊಳ್ಳುತ್ತವೆ. ಎಮ್ಮೆ ನೋಡುವುದಕ್ಕೆ ಇಲಿಯ ಹಾಗೆಯೋ ಮೊಲದ ಹಾಗೆಯೋ ಚಿಕ್ಕದಾಗೇನಿರುವುದಿಲ್ಲ. ಆದರೂ ಕೆಲವು ಹಳ್ಳಿಗಳಲ್ಲಿ ಮೇಯಲು ಹೋದಾಗ ಅವು ಕಳೆದು ಹೋಗುವುದುಂಟು. ಈಗಂತೂ ಮೋಟಾರು ಸೈಕಲ್, ಸ್ಕೂಟರಿಗೆ ಇರುವಷ್ಟು ಹೆಚ್ಚಿನ ಬೆಲೆ ಈ ಎಮ್ಮೆಗಳಿಗೂ ಇರುವುದರಿಂದ ಎಮ್ಮೆ ಮಾಲೀಕರು ತಮ್ಮ ಎಮ್ಮೆ ಕಳೆದಿದೆ ಎಂದು ಪತ್ರಿಕೆಗಳಲ್ಲಿ ಜಾಹೀರಾತು ಕೊಡುತ್ತಾರೆ.

ಇದನ್ನು ಓದುವಾಗ, ಅತ್ತೆಗೊಂದು ಕಾಲ ಸೊಸೆಗೊಂದು ಕಾಲ ಎಂಬಂತೆ ನಾಲ್ಕು ಕಾಲಿನ ಎಮ್ಮೆಗೂ ಒಂದು ಕಾಲ ಬಂತಲ್ಲ ಎಂದು ಎಮ್ಮೆ ಭಕ್ತರಿಗೆ ಖುಷಿಯಾಗುವುದು ಸಹಜ. ನಾವು ಚಿಕ್ಕವರಿರುವಾಗ ಎಮ್ಮೆ ಕರು ಹಾಕಿದ ಸುದ್ದಿ ಬಂದ ತಕ್ಷಣ ಅಜ್ಜನ ಮನೆಗೆ ಹೋಗುತ್ತಿದ್ದೆವು. ಕಾರಣ ಆಗ ನಮಗೆ ಹಳ್ಳಿಯಲ್ಲಿ ಐಸ್‌ಕ್ರೀಮ್, ಯೋಗರ್ಟುಗಳೆಲ್ಲ ಸಿಗುತ್ತಿರಲಿಲ್ಲ. ಎಮ್ಮೆ ಕರು ಹಾಕಿದ ನಂತರ ಕೆಲವು ದಿನಗಳ ಕಾಲ ಅದರ ಹಾಲಿನಿಂದ ಮಾಡುತ್ತಿದ್ದ ಗಿಣ್ಣು ತುಂಬಾ ರುಚಿ.

ಎಮ್ಮೆಗಳು ರೈತರ ಆಪ್ತ ಒಡನಾಡಿಗಳೂ ಹೌದು. ಕೃಷಿಗೆ ಅಗತ್ಯವಾದ ಗೊಬ್ಬರಕ್ಕೆ ಎಮ್ಮೆ ಸಗಣಿಯಷ್ಟು ಸೂಕ್ತವಾದದ್ದು ಮತ್ತೊಂದಿಲ್ಲ. ಹಳ್ಳಿ ಹೆಣ್ಣುಮಕ್ಕಳು ಈ ಸಗಣಿಯಿಂದ ಬೆರಣಿ ತಟ್ಟುತ್ತಾ ತಮ್ಮ ಉಪ ವೃತ್ತಿ ನಡೆಸುತ್ತಿದ್ದ ಜೀವನ ಕ್ರಮ ಹಿಂದೆ ಸಾಮಾನ್ಯವಾಗಿತ್ತು. ಆದರೆ ಈಗ ಟೀವಿ ಧಾರಾವಾಹಿಗಳ ಭರಾಟೆಗಳಲ್ಲಿ ಸಂಜೆ ವೇಳೆ ಕೊಟ್ಟಿಗೆಗೆ ಹೋಗಿ ಹಾಲು ಕರೆಯುವುದೇ ಈ ಮಹಿಳಾ ಮಣಿಗಳಿಗೆ ತುಂಬಾ ಕಷ್ಟದ ಕೆಲಸವಾಗಿದೆ.

ಎಮ್ಮೆಯ ಹೊಟ್ಟೆ ದೊಡ್ಡ ಡ್ರಮ್ಮಿನಂತಿದ್ದರೂ, ಅವು ಪಕ್ಕಾ ಸಸ್ಯಾಹಾರಿಗಳಾಗಿ ಹುಲ್ಲು, ಸೊಪ್ಪು, ಜೋಳದ ದಂಟು, ಹತ್ತಿಕಾಳುಗಳಂಥ ಅಗ್ಗದ ನೈಸರ್ಗಿಕ ಉತ್ಪನ್ನಗಳನ್ನೇ ತಿನ್ನುಣ್ಣುತ್ತಾ ಖುಷಿಯಾಗಿರಬಲ್ಲವು. ಎಮ್ಮೆಗಳೇನು ಪಿಜ್ಜಾ, ಬರ್ಗರುಗಳೇ ತಮಗೆ ತಿನ್ನಲು ಬೇಕೆಂದು ನಮಗೆ ಪೀಡಿಸುವುದಿಲ್ಲ. ಹೀಗಾಗಿ ರೈತರಿಗೆ ಎಮ್ಮೆ ಸಾಕುವುದೆಂದರೆ ಬಿಳಿ ಆನೆ ಸಾಕಿದಂತೆ ಕಷ್ಟವೇನೂ ಅಲ್ಲ.

ನರಿ, ತೋಳ, ಹಂದಿ, ಕೋತಿ, ಕರಡಿಗಳಂತಹ ಪ್ರಾಣಿಗಳಿಗೆ ಹೋಲಿಸಿದರೆ ಎಮ್ಮೆ ತೀರಾ ಸಜ್ಜನಿಕೆಯ ಪ್ರಾಣಿ. ಸೊಂಪಾಗಿರುವ, ಮೈ ಕೆಚ್ಚಲು ತುಂಬಿಕೊಂಡಿರುವ ಎಮ್ಮೆ ಒಂದು ವೇಳೆ ಸೀರೆ ಉಟ್ಟುಕೊಳ್ಳುವುದನ್ನೂ ಕಲಿತಿದ್ದರೆ, ಸೌಂದರ್ಯ ಸ್ಪರ್ಧೆಯಲ್ಲಿ ಎಷ್ಟೋ ಸಿನಿಮಾ ನಟಿಯರನ್ನೇ ಮೀರಿಸುತ್ತಿತ್ತೇನೋ.

ಕೆಲವು ತಳಿಗಳ ಎಮ್ಮೆಗಳು ಅಶೋಕ್ ಲೈಲ್ಯಾಂಡ್ ಟ್ರಕ್ಕಿನಂತೆ, ಇನ್ನೂ ಕೆಲವು ಎಮ್ಮೆ ತಳಿಗಳು ಆನೆ ಮರಿಗಳಂತೆ ಕಂಗೊಳಿಸುವುದರಿಂದ ಎಮ್ಮೆಗೆ ಕೆಟ್ಟ ದೃಷ್ಟಿ ಬೀಳಬಾರದು ಎಂದು ದೀಪಾವಳಿ ಹಬ್ಬದಲ್ಲಿ ನಮ್ಮೂರಿನಲ್ಲಿ ಎಮ್ಮೆಗೂ ದೃಷ್ಟಿ ತೆಗೆಯುವ ಸಂಪ್ರದಾಯವಿತ್ತು.

ವೀಕೆಂಡಿಗೆ ಪೇಟೆಗೆ ಕರೆದುಕೊಂಡು ಹೋಗಬೇಕು, ಸಿನಿಮಾ ತೋರಿಸಬೇಕು ಅಥವಾ ಹೋಟೆಲ್ ತಿಂಡಿ ತಿನ್ನಿಸಬೇಕು ಎಂದು ಹೆಂಡತಿ ಬೇಡಿಕೆ ಇಡುವಂತೆ ಈ ಎಮ್ಮೆಗಳು ಯಾವತ್ತೂ ವರಾತ ಮಾಡುವುದಿಲ್ಲ. ಹಾಸಿಗೆ ಇದ್ದಷ್ಟೇ ಕಾಲು ಚಾಚು ಎಂಬ ಮಾತಿದೆ, ಆದರೆ ಎಮ್ಮೆಗೆ ಹಾಸಿಗೆಯೂ ಬೇಡ. ಹಾಸಿಗೆ ಇಲ್ಲದೆಯೇ ಕಾಲು ಚಾಚಿಕೊಂಡು ಸುಖಿ ಜೀವನ ನಡೆಸುವುದು ಎಮ್ಮೆಯ ಹುಟ್ಟುಗುಣ.

ಸರಳ ಮತ್ತು ಸಂತೃಪ್ತಿಯ ಜೀವನವನ್ನು ಮನುಷ್ಯ ಕಲಿತುಕೊಳ್ಳಬೇಕೆಂದರೆ, ಎಮ್ಮೆಯ ಬದುಕಿನ ಕ್ರಮ ಅನುಸರಿಸಿದರೆ ಸಾಕಲ್ಲವೆ?

ಪ್ರತಿಕ್ರಿಯಿಸಿ: **feedback@sudha.co.in**